# ಹೃದ್ರೋಗ ತಪಾಸಣೆಗಾಗಿ 'ಮೊಬೈಲ್ ಕ್ಯಾತ್ ಲ್ಯಾಬ್' ಸಂಚಾರಿ ಸೇವೆ

ಪ್ರಜಾವಾಣಿ ವಾರ್ತೆ

**ಮಂಡ್ಯ:** ಬೆಂಗಳೂರಿನ ವೈವಸ್ ಗ್ರೂಪ್‌ನಿಂದ ಹೃದ್ರೋಗ ಸಂಬಂಧಿ ತಪಾಸಣೆಗಾಗಿ 'ಮೊಬೈಲ್ ಕ್ಯಾತ್ ಲ್ಯಾಬ್' ಸಂಚಾರಿ ಸೇವೆಯನ್ನು ಆರಂಭಿಸಿದ್ದು, ಜಿಲ್ಲೆಯ ಜನತೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಂಸ್ಥೆಯ ಮುಖ್ಯಸ್ಥ ಶ್ರೀನಿವಾಸ್ ಮನವಿ ಮಾಡಿದ್ದಾರೆ.

ಹೃದ್ರೋಗ ಸಂಬಂಧಿ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಗ್ರಾಮಾಂತರ ಪ್ರದೇಶದ ಜನತೆ ದೊಡ್ಡ ನಗರಗಳಿಗೆ ತೆರಳಬೇಕಾಗಿದೆ. ಇದರಿಂದ ಹೆಚ್ಚು ಆರ್ಥಿಕ ಹೊರೆ ಬೀಳಲಿದ್ದು, ಮೊಬೈಲ್ ಕ್ಯಾತ್ ಲ್ಯಾಬ್ ಸೇವೆಯಿಂದಾಗಿ ಕಡಿಮೆ ವೆಚ್ಚದಲ್ಲಿ ಜಿಲ್ಲಾ ಕೇಂದ್ರಗಳಲ್ಲಿಯೇ ತಪಾಸಣೆ ಪಡೆದುಕೊಳ್ಳಬಹುದಾಗಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ವೈವಸ್ ಗ್ರೂಪ್ ಹಾಗೂ ಶ್ರೀನಿವಾಸ ಕಾರ್ಡಿಯಾಲಜಿ ಸೆಂಟರ್ ವತಿಯಿಂದ ಈ ಸೇವೆಯನ್ನು ಆರಂಭಿಸಲಾಗಿದೆ. ಮಂಡ್ಯ ಸೇರಿದಂತೆ ಆಯ್ದ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಯೋಜನೆಯನ್ನು ಜಾರಿ ಮಾಡಲಾಗಿದೆ ಎಂದು ಹೇಳಿದರು.

ಹೃದ್ರೋಗ ತಜ್ಞ ಡಾ.ಕೇಶವ್ ಮಾತನಾಡಿ, ಮೊಬೈಲ್ ಕ್ಯಾತ್ ಲ್ಯಾಬ್‌ನಲ್ಲಿ ಹೃದಯ ಸಂಬಂಧಿ ತಪಾಸಣೆಗಳನ್ನು ಅತಿ ಕಡಿಮೆ ವೆಚ್ಚದಲ್ಲಿ ಸ್ಥಳೀಯವಾಗಿ ಮಾಡಲಾಗುವುದು. ಯಶಸ್ವಿನಿ ಫಲಾನುಭವಿಗಳಿಗೆ ಉಚಿತವಾಗಿ ತಪಾಸಣೆ ನಡೆಸಲಾಗುವುದು ಎಂದರು.

ಏಷ್ಯಾದಲ್ಲಿಯೇ ಪ್ರಥಮ ಬಾರಿಗೆ ಸಂಚಾರಿ ಕ್ಯಾತ್ ಲ್ಯಾಬ್ ಸೇವೆ ಇದಾಗಿದ್ದು, 40 ಅಡಿ ಟ್ರೇಲರ್‌ನಲ್ಲಿ ಈ ಸಾಧನವನ್ನು ಅಳವಡಿಸಲಾಗಿದೆ. ಇದು ಸೂಕ್ಷ್ಮ ಜೀವಿಗಳಿಂದ ಮುಕ್ತವಾದ ಹವಾನಿಯಂತ್ರಿತ ಸ್ಥಳವಾಗಿದ್ದು, ಕಾರ್ಡಿಯಕ್ ಕ್ಯಾತರೈಸೇಶನ್ ಟ್ರೇಲರ್‌ನ ಒಳಗೆ ನಡೆಯುತ್ತದೆ ಎಂದು ಹೇಳಿದರು.

ತೀವ್ರವಾದ ರೋಗದಿಂದ ಬಳಲುವವರು ಮಾತ್ರ ಆಂಜಿಯೋಪ್ಲಾಸ್ಟಿ ಅಥವಾ ಬೈಪಾಸ್ ಸರ್ಜರಿ ಬೆಂಗಳೂರಿಗೆ ಬರಬೇಕಾಗುತ್ತದೆ. ಈ ಬಗೆಯ ರೋಗ ಪತ್ತೆ ವ್ಯವಸ್ಥೆ ಆರೋಗ್ಯ ಶುಶ್ರೂಷೆಯ ವೆಚ್ಚವನ್ನು ಕಡಿಮೆ ಮಾಡುವುದರ ಜತೆಗೆ ಎಲ್ಲವನ್ನು ಸರಳವಾಗಿಸುತ್ತದೆ ಎಂದರು.

ಪ್ರತಿ ತಿಂಗಳ ಎರಡನೇ ಶನಿವಾರ ನಗರದ ಸ್ಯಾಂಜೋ ಆಸ್ಪತ್ರೆ ಆವರಣದಲ್ಲಿ ಈ ಸೇವೆ ಲಭ್ಯವಿದೆ. ನಂತರ ಪ್ರತಿ ಶುಕ್ರವಾರ ಮಮತ ನರ್ಸಿಂಗ್ ಹೋಂ ಕಟ್ಟಡದಲ್ಲಿರುವ ವೈವಸ್ ಕೇಂದ್ರದಲ್ಲಿ ಅಗತ್ಯ ತಪಾಸಣೆ ನಡೆಸಲಾಗುವುದು ಎಂದು ತಿಳಿಸಿದರು.

ಸಂಸ್ಥೆಯ ಮುಖಂಡರಾದ ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.